**ದಿನಾಂಕಃ 23/07/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಎಸ್ ಎಸ್ ವಕೀಲರಿಂದಃ**

1. ಅಹಮದ್ ಶರೀಪ್ ಮತ್ತು ಜಹೀರ್ ಉನ್ನೀಸಾ ರವರ ಮಗಳು ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಅವರ ಮಗಳಲ್ಲ ಎಂದರೆ ಸರಿಯಲ್ಲ. ಅವರಿಬ್ಬರು ಈಗ ಮರಣ ಹೊಂದಿದ್ದಾರೆ. ಅಹಮದ್ ಶರೀಪ್ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅವರಿಬ್ಬರು ನಿಖರವಾಗಿ ಯಾವ ತಾರೀಖು, ತಿಂಗಳು ಮತ್ತು ಇಸವಿ ಎಂದು ಮರಣಗೊಂಡರು ಎಂದು ಹೇಳಲಾಗುವುದಿಲ್ಲ. ಅವರಿಗೆ 9 ಜನ ಮಕ್ಕಳು. ಅವರಿಗೆ ಇಬ್ಬರು ಗಂಡು ಮಕ್ಕಳು, 7 ಜನ ಹೆಣ್ಣು ಮಕ್ಕಳು. ಅವರ ಹೆಸರು ಗಂಡು ಮಕ್ಕಳ ಹೆಸರು ಕಯುಮ್ ಶರೀಫ್ , ಆಪ್ತಾಬ್ ಶರೀಪ್ ಮತ್ತು ಹೆಣ್ಣು ಮಕ್ಕಳ ಹೆಸರು ಮಖ್ ಬುಲ್ ಜಾನ್, ನೂರ್ ಜಾನ್, ಖೀಜುರ್ನ್ , ಅಸ್ರತ್ ಉನ್ನೀಸಾ, ನುಸ್ರತ್ ಉನ್ನೀಸಾ, ಹೀರತ್ ಉನ್ನೀಸಾ, ಹಶಮತ್ ಉನ್ನೀಸಾ. ಎಲ್ಲಾ 7 ಜನ ಹೆಣ್ಣು ಮಕ್ಕಳು ಜೀವಂತ ಇದ್ದಾರೆ. ಕಯುಮ್ ಶರೀಫ್ ಮತ್ತು ಆಪ್ತಾಬ್ ಶರೀಪ್ ಯಾವಾಗ ಮರಣ ಗೊಂಡರು ಎಂದು ನೆನಪಿಲ್ಲ. ಆದರೆ ದಾಖಲೆ ನೀಡಿದ್ದೇನೆ.

2. ದಾವೆಯನ್ನು 14 ಸ್ವತ್ತುಗಳಿಗೆ ಭಾಗಾಂಶ ಕೋರಿ ಹೂಡಿದ್ದೇನೆ. ದಾವಾ ಸ್ವತ್ತುಗಳ ಸರ್ವೆ ನಂ., ವಿಸ್ತೀರ್ಣ ಮತ್ತು ಚೆಕ್ಕುಬಂದಿ ಹೇಳಲಾಗುವುದಿಲ್ಲ. ದಾವಾ ಸ್ವತುಗಳು ನನ್ನ ತಂದೆಗೆ ಅಥವಾ ತಾತನಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಗಂಡನಿಗೆ ಸೇರಿದ್ದು ಎಂದರೆ ಸರಿಯಲ್ಲ. ನನ್ನ ತಾತನ ಹೆಸರು ಜಮಾಲ್ ಶರೀಫ್ . ವಾದ ಪತ್ರದಲ್ಲಿ ಅವರ ಹೆಸರನ್ನು ಕಾಣಿಸಿದ್ದೇವೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ನನ್ನ ತಂದೆಯ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಅಲ್ತಾಪ್ ಶರೀಪ್ ರವರಿಗೆ ಸೇರಿದ ಸ್ವತ್ತುಗಳು ಎಂದರೆ ಸರಿಯಲ್ಲ. ಅಲ್ತಾಪ್ ಶರೀಪ್ ರವರು ಜೀವಂತ ಇದ್ದಾಗ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವ್ಯವಸಾಯ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಅಲ್ತಾಪ್ ಶರೀಪ್ ರವರು ಜೀವಂತ

ಇದ್ದಾಗ ಹುಣಸೆ ಹಣ್ಣಿನ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅವರ ಸ್ವತ್ತನ್ನು ಕಬಳಿಸಲು ಹುಣಸೆ ಹಣ್ಣಿನ ವ್ಯಾಪಾರ ಮಾಡುತ್ತಿರಲಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ವಾದ ಪತ್ರದ ಒಕ್ಕಣೆಯನ್ನು ನಾನೇ ಹೇಳಿ ಬರೆಸಿದ್ದೇನೆ. ದಾವಾ ಐಟಂ – 4 ಅಲ್ತಾಪ್ ಶರೀಪ್ ಜೀವಂತ ವಿರುವಾಗ ಅವರ ಚಿಕ್ಕಪ್ಪನಾದ ಆಸೀನ್ ಶರೀಪ್ ಮತ್ತು ಜಮಲ್ ಶರೀಪ್ ರವರಿಂದ ಅವರಿಗೆ ಬಂದಂತಹ ಸ್ವತ್ತು ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹಿ.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**